


ವಿಶ್ಲೇಷಿಸುವವರು ಇತ್ತೀಚಿನ ವರ್ಷಗಳಲ್ಲಿ ಹೆಚ್ಚಾಗುತ್ತಿದ್ದಾರೆ. ಎಡ–ಬಲಗಳಿಗೆ ಭಿನ್ನವಾಗಿ 'ಸಂವಿಧಾನ ಪಂಥ', 'ಸಂವಿಧಾನ ಪಂಥೀಯರು' ಎನ್ನುವ ಪರಿಕಲ್ಪನೆಗಳು ಜನಪ್ರಿಯಗೊಳ್ಳುತ್ತಿವೆ. ಈ ಬೆಳವಣಿಗೆ, ಸಮತೆ ಮತ್ತು ಮಮತೆಯ ನೆಲೆಗಟ್ಟಿನಲ್ಲಿ ಸಮಾಜವನ್ನು ಕಟ್ಟಲು ಹಂಬಲಿಸುವ ಮನಸ್ಸುಗಳ ಸಂಖ್ಯೆ ಹೆಚ್ಚಾಗುತ್ತಿರುವುದಕ್ಕೆ ಸಂಕೇತವಾಗಿರುವಂತೆ, ಸಂವಿಧಾನದ ಕುರಿತ ಅರಿವು ಹೆಚ್ಚುತ್ತಿರುವುದರ ನಿದರ್ಶನವೂ ಆಗಿದೆ.

ವೈಚಾರಿಕ ಹಾಗೂ ವೈಜ್ಞಾನಿಕ ಮನೋಭಾವ ಭಾರತದ ಸಂವಿಧಾನದ ಕೇಂದ್ರದಲ್ಲಿದ್ದರೂ, ಈ ನೆಲದ ಭಾವಕೋಶದ ಭಾಗವಾದ ಪುರಾಣಗಳನ್ನು, ಧರ್ಮಸ್ಮೃತಿಗಳನ್ನು, ಜನಸಮೂಹಗಳ ನಂಬಿಕೆಗಳನ್ನು ಸಂವಿಧಾನ ನಿರ್ಲಕ್ಷಿಸಿಲ್ಲ. ಎಲ್ಲ ಧರ್ಮಗಳ ಆದರ್ಶಗಳನ್ನೂ ಸಂವಿಧಾನ ಪ್ರತಿನಿಧಿಸುತ್ತದೆ. ಎಲ್ಲ ಧರ್ಮೀಯರಿಗೂ ಧಾರ್ಮಿಕ ಸ್ವಾತಂತ್ರ್ಯವನ್ನು ನೀಡುವ ಸಂವಿಧಾನ, ಬಹುತ್ವದ ಚೆಲುವನ್ನು ಒಳಗೊಂಡಿರುವಂತಹದ್ದು.

ಸಂವಿಧಾನದ ಶಕ್ತಿಯನ್ನು ಅರಿಯಲು 'ಚರ್ಮ ಕುಟೀರ'ಗಳಿಗೆ ಹೋಗಬೇಕು. ಮನುಷ್ಯನೊಬ್ಬ ಕಾಲು ಚಾಚಿ ಕೂರಬಹುದಾದಷ್ಟು ಸಣ್ಣದಾದ ಈ ಕುಟೀರಗಳಲ್ಲಿ ಅಂಬೇಡ್ಕರ್ ಅವರ ಭಾವಚಿತ್ರವೊಂದು ಕಾಣಿಸುತ್ತದೆ. ದೇವರ ಪಟದ ಸ್ಥಾನದಲ್ಲಿರುವ ಅಂಬೇಡ್ಕರ್ ಫೋಟೊ ಏನನ್ನು ಸೂಚಿಸುತ್ತದೆ? 'ಜೈ ಭೀಮ್' ಎನ್ನುವ ಘೋಷಣೆ ಕೋಟಿ ಕೋಟಿ ಜನರಲ್ಲಿ ರೋಮಾಂಚನ ಹುಟ್ಟಿಸುವುದರ ಜೊತೆಗೆ ಬದುಕಿನ ತಾತ್ವಿಕತೆ ಆಗಿರುವುದು ಹೇಗೆ? ಸಾಮಾಜಿಕ ಬದಲಾವಣೆಗೆ ಹಂಬಲಿಸುತ್ತಿರುವ ಅಸಂಖ್ಯ ಮನಸ್ಸುಗಳು ಅಂಬೇಡ್ಕರ್ ಚಿಂತನೆಗಳನ್ನು ನೆಚ್ಚಿಕೊಂಡಿರುವುದೇಕೆ? ನೀಲಿ ಶಾಲು ಅಥವಾ ಅಂತಃಕರಣದ ಅನಂತ ಬಯಲಿನಂತೆ ಭಾಸವಾಗುವುದು ಹೇಗೆ? ಈ ಪ್ರಶ್ನೆಗಳಿಗೆ ಉತ್ತರ ಸರಳ: ಈ ದೇಶದ ಕಟ್ಟಕಡೆಯ ನಾಗರಿಕರಿಗೆ ತಮ್ಮ ವಿಮೋಚನೆ ಯಾವುದರಲ್ಲಿದೆ ಎನ್ನುವುದನ್ನು ಬಾಬಾ ಸಾಹೇಬರ ಚಿತ್ರಪಟ ಸೂಚಿಸುತ್ತದೆ. ಅಂಬೇಡ್ಕರ್ ಹಾಗೂ ಸಂವಿಧಾನ ಒಂದೇ ನಾಣ್ಯದ ಎರಡು ಮುಖಗಳಷ್ಟೇ. 'ಜೈ ಭೀಮ್' ಎನ್ನುವ ಘೋಷವಾಕ್ಯ ಸಮಾನತೆಯ ಹಂಬಲವೂ, ಪ್ರೇಮದ ಅಭಿವ್ಯಕ್ತಿಯೂ, ಆತ್ಮವಿಶ್ವಾಸದ ತಾರಕಮಂತ್ರವೂ ಆಗಿದೆ. ನೀಲಿ ಬಣ್ಣ ಎಲ್ಲರನ್ನೂ ಒಳಗೊಳ್ಳುವ ಆತ್ಮೀಯತೆಯ ಅನುಭೂತಿಯ ಜೊತೆಗೆ ಸೈರಣೆ, ಸ್ಫೂರ್ತಿ, ಸ್ಥಿರತೆಗಳ ಸಂಕೇತವಾಗಿದೆ.

## ಜನರ ನೋವಿಗೆ ಮಿಡಿವ ಪ್ರಾಣಮಿತ್ರ

ಭಾರತದ ಸಂವಿಧಾನದ ವಿಶೇಷ ಇರುವುದೇ ಅದು ರೂಪುಗೊಂಡಿರುವ ಬಗೆಯಲ್ಲಿ. ಸಂವಿಧಾನಕ್ಕೆ ರಕ್ತ ಮಾಂಸಗಳನ್ನು ತುಂಬುವವರು ವಿದ್ವತ್ ಪರಂಪರೆಗೆ ಸೇರಿದವರೂ, ರಾಜಕೀಯಶಾಸ್ತ್ರಗಳನ್ನೂ ವಿದೇಶಾಂಗ ವ್ಯವಹಾರಗಳನ್ನೂ ಬಲ್ಲವರಾಗಿರುವುದು ಸಹಜ. ಭಾರತದ ಸಂವಿಧಾನ ರಚನೆಯಲ್ಲೂ ಶಾಸ್ತ್ರಕೋವಿದರ ಸಹಭಾಗಿತ್ವವಿತ್ತು. ಆದರೆ, ಸಂವಿಧಾನ ಕರಡು ರಚನೆಯ ನೇತೃತ್ವ ವಹಿಸಿದ್ದ ಅಂಬೇಡ್ಕರ್ ಕೇವಲ ವಿದ್ವಾಂಸರಾಗಿರಲಿಲ್ಲ, ಶಾಸ್ತ್ರಕೋವಿದರಷ್ಟೇ ಆಗಿರಲಿಲ್ಲ; ಅವರು ಸಾಮಾಜಿಕವಾಗಿ ಆರ್ಥಿಕವಾಗಿ ಹಿಂದುಳಿದ ಹಾಗೂ ನೊಂದ ಸಮುದಾಯಕ್ಕೆ ಸೇರಿದವರೂ ಆಗಿದ್ದರು.

## ನನ್ನ ಪಾಲಿನ ರಕ್ಷಿತ ಭಾಷೆ

**–ಡಾ. ಗಂಗಪ್ಪ ಎ.**, ಲೇಖಕ, ಉಪನ್ಯಾಸಕ, ಬೆಂಗಳೂರು

ಸಂವಿಧಾನದ ಮೂಲಭೂತ ಹಕ್ಕು ಮತ್ತು ಕರ್ತವ್ಯಗಳನ್ನು ಸರ್ಕಾರ ಕಾಲ ಕಾಲಕ್ಕೆ, ಸಂವಿಧಾನದ ಆಶಯಗಳಿರುವ ಹಲವಾರು ಯೋಜನೆಗಳನ್ನು ರೂಪಿಸಿ ಜಾರಿಗೆ ತಂದಿದೆ. ಅಂತಹ ಯೋಜನೆಗಳಲ್ಲಿ ಶಿಕ್ಷಣ ಮುಖ್ಯವಾದುದು.




ಅಕ್ಷರ ಲೋಕದಿಂದ ಅನಂತ ದೂರದಲ್ಲಿದ್ದ ನನ್ನಂತಹ ಸಣ್ಣ ಸಮುದಾಯ ವ್ಯಕ್ತಿಗೆ ಸಂವಿಧಾನವು ವ್ಯಕ್ತಿತ್ವ ವಿಕಸನದ ಭಾಗವಾಗಿ ನಿಂತಿದೆ. ಇದರ ಮೀಸಲಾತಿಯ ಫಲದಿಂದಾಗಿ ನನ್ನ ವಿದ್ಯಾರ್ಥಿ ಜೀವನದ ವಾರ್ಷಿಕ 300 ರೂಪಾಯಿಗಳ ವಿದ್ಯಾರ್ಥಿ ವೇತನದಿಂದ ವಿಶ್ವವಿದ್ಯಾಲಯ ಮಟ್ಟದ ಉನ್ನತ ವ್ಯಾಸಂಗಕ್ಕೆ ಮಾಸಿಕ 30 ಸಾವಿರದವರೆಗೆ ಕೆಲವು ವರ್ಷಗಳ ಕಾಲ ಶಿಷ್ಯವೇತನವನ್ನು ಪಡೆಯುವಂತಾಯಿತು. ಇದು ಆರ್ಥಿಕವಾಗಿ, ಶೈಕ್ಷಣಿಕವಾಗಿ, ಸಾಮಾಜಿಕವಾಗಿ ಜೊತೆಯಾಗಿ ನಿಂತ ಪರಿಣಾಮ ಭೌತಿಕವಾಗಿ–ಬೌದ್ಧಿಕವಾಗಿ ಗುಲಾಮಗಿರಿಯನ್ನು ದೂರ ಮಾಡಿತು. ಶ್ರಮಿಕ ವರ್ಗದ ಬವಣೆಯನ್ನು, ಮಹಿಳೆ, ಮಕ್ಕಳು, ಅಲ್ಪಸಂಖ್ಯಾತರು, ಲೈಂಗಿಕ ಅಲ್ಪಸಂಖ್ಯಾತರು ಹಾಗೂ ಅಂಗವಿಕಲರ ನೋವು ನಲಿವುಗಳನ್ನು ಅರ್ಥ ಮಾಡಿಕೊಳ್ಳಲು ಅವಕಾಶ ನೀಡಿತು. ಗ್ರಾಮ್ಯ ಬದುಕು ಕಂಡ ನನಗೆ ಉದ್ಯೋಗದ ಮೂಲಕ ಮಹಾನಗರದ ಕಡೆಗೆ ಯಾನವನ್ನೂ ಮಾಡಿಸಿತು. ಬಹುತ್ವ ನಾಡಿನ, ಬಹು ಸಂಸ್ಕೃತಿಯ ಬೀಡಿನ ಲೋಕ ದರ್ಶನವನ್ನು ನನ್ನ ಅಂತರಾಳಕ್ಕೆ ಬೇರೂರುವಂತೆ ಮಾಡಿತು. ಸಂವಿಧಾನವು ನನ್ನ ಜೀವನಯಾನದಲ್ಲಿ ಸದಾ ಜತೆಗಿರುವ ಸಂಗಾತಿ; ದನಿಯಿಲ್ಲದವರ ದನಿಯಾಗಿ, ಅಸಂಖ್ಯಾತ ಶೋಷಿತ, ಅಲಕ್ಷಿತ ಸಮುದಾಯದ ರಕ್ಷಿತ ಭಾಷೆಯಾಗಿ ನಿಂತು ಧೈರ್ಯ ತುಂಬುತ್ತಿದೆ.

